ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:ಚಿಕ್ಕಮಗಳೂರು ವಿಭಾಗ: ಚಿಕ್ಕಮಗಳೂರು.

ಸಂ:ಕರಾಸಾ/ಚಿವಿ/ಸಂ/ವಾ/ 940/2016-17 ದಿನಾಂಕ:18-07-2016

## ಸಂಧಾನಕ್ಕೆ ಆಹ್ವಾನ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಿಕ್ಕಮಗಳೂರು ವಿಭಾಗದ ಆಡಳಿತ ವ್ಯಾಪ್ತಿಗೆ ಸೇರಿದ ಈ ಕೆಳಕಂಡ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ/ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳು/ತೆರೆದ ಜಾಗಗಳಿಗೆ ಪರವಾನಿಗೆದಾರರನ್ನು ಸಂಧಾನದ ಪ್ರಕ್ರಿಯೆಯ ಮೂಲಕ ಆಯ್ಕೆಮಾಡಲು ಅಸಕ್ತ ವಾಣಿಜ್ಯ ಉದ್ಯಮಿದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ | ನಿಲ್ದಾಣದ ಹೆಸರು | ವಾಣಿಜ್ಯ ಮಳಿಗೆ/ ತೆರೆದ ಜಾಗದ ವಿವರ ಹಾಗೂ ತೆರೆವುಗೊಳ್ಳುವ ದಿನಾಂಕ | ಪರವಾನಿಗಿ ಅವಧಿ | ನಿಗದಿ ಪಡಿಸಿದ ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ | ವಿಸ್ತೀರ್ಣ ಚ.ಅಡಿ ಗಳಲ್ಲಿ |
|---|---|---|---|---|---|---|
| 1 | ಚಿಕ್ಕಮಗಳೂರು | ಎ.ಟಿ.ಎಂ.ಬ್ಯಾಂಕ್ ಕೌಂಟರ್(ತೆರೆದ ಜಾಗ) | 5 ವರ್ಷ | 17,250/- | 51,750/- | 100 |
| 2 | ಚಿಕ್ಕಮಗಳೂರು | ದ್ವಿಚಕ್ರ ವಾಹನ ನಿಲುಗಡೆ-2(ತೆರೆದ ಜಾಗ) | 3 ವರ್ಷ | 17,777/- | 53,331/- | 2400.0 |
| 3 | ಚಿಕ್ಕಮಗಳೂರು | ಜನರಲ್ ಸ್ಟಾಲ್-3 (ತೆರೆದ ಜಾಗ) | 3 ವರ್ಷ | --- | 27,150/- | 36.0 |
| 4 | ಕಳಸಾಪುರ | ಉಪಹಾರ ಗೃಹ | 5 ವರ್ಷ | --- | 34,550/- | 697.0 |
| 5 | ಕಳಸಾಪುರ | ಜನರಲ್ ಸ್ಟಾಲ್-3 | 5 ವರ್ಷ | 3,311/- | 10,000/- | 106.67 |
| 6 | ಅರಸೀಕೆರೆ | ಉಪಹಾರ ಗೃಹ | 5 ವರ್ಷ | 85,500/- | 2,56,500/ | 1367.0 0 |
| 7 | ಅರಸೀಕೆರೆ | ಜನರಲ್ ಸ್ಟಾಲ್-6 | 5 ವರ್ಷ | 13,365/- | 40,095/- | 65.66 |
| 8 | ಅರಸೀಕೆರೆ | ಜನರಲ್ ಸ್ಟಾಲ್-8 | 5 ವರ್ಷ | 24,936/- | 74,808/- | 103.00 |
| 9 | ಅರಸೀಕೆರೆ | ಎಟಿಎಂ ಕೌಂಟರ್ (ತೆರೆದ ಜಾಗ) | 5 ವರ್ಷ | 4,730/- | 14,190/- | 100.00 |
| 10 | ಕಡೂರು | ಜನರಲ್ ಸ್ಟಾಲ್-10 (ಪ್ಲಾಟ್ ಫಾರಂ) | 5 ವರ್ಷ | 4,221/- | 12,663/- | 152.74 |
| 11 | ಕಡೂರು | ಜನರಲ್ ಸ್ಟಾಲ್-10(ರೈಲ್ವೆ ನಿಲ್ದಾಣ ಕಡೆ) | 5 ವರ್ಷ | 35,559/- | 1,06,677/ - | 119.80 |
| 12 | ಸಖರಾಯಪಟ್ಟಣ | ಜನರಲ್ ಸ್ಟಾಲ್-2 | 5 ವರ್ಷ | --- | 11,300/- | 124.0 |
| 13 | ಸಖರಾಯಪಟ್ಟಣ | ಜನರಲ್ ಸ್ಟಾಲ್-3 | 5 ವರ್ಷ | 4,235/- | 12,705/- | 124.00 |
| 14 | ಸಖರಾಯಪಟ್ಟಣ | ಜನರಲ್ ಸ್ಟಾಲ್-4 | 5 ವರ್ಷ | --- | 14,050/- | 124.0 |
| 15 | ಸಕಲೇಶಪುರ | ಜನರಲ್ ಸ್ಟಾಲ್-6 (ಮೊ.ಮಹಡಿ) | 5 ವರ್ಷ | 7,500/- | 22,500/- | 1117.7 0 |

| | | | | | | |
|---|---|---|---|---|---|---|
| 16 | ಕೊಟ್ಟಿಗೆಹಾರ | ಉಪಹಾರ ಗೃಹ | 5 ವರ್ಷ | 45,100/- | 1,35,300/ | 1057.02 |

ಸದರಿ ಮಳಿಗೆಗಳನ್ನು ನಡೆಸಲು ಅಸಕ್ತರು ನಿಗದಿ ಪಡಿಸಿದ ಇ.ಎಂ.ಡಿ ಮೊತ್ತಕ್ಕೆ ಡಿ.ಡಿ.ಯನ್ನು (ರಾಷ್ಟ್ರೀಕೃತ ಬ್ಯಾಂಕ್) Divisional Controller, K.S.R.T.C. Chikkamagalur Division, ಪದನಾಮಕ್ಕೆ ಸಂಧಾಯವಾಗುವಂತೆ ಪಡೆದು ಮನವಿ ಪತ್ರದೊಂದಿಗೆ ವಿಭಾಗೀಯ ಕಛೇರಿ, ಚಿಕ್ಕಮಗಳೂರಿನಲ್ಲಿ ದಿನಾಂಕ:11-08-2016ರಂದು 15.00 ಗಂಟೆಗೆ ನಡೆಯುವ ಸಂಧಾನದ ನಿಯಮವಳಿಗಳನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಿಂದ ಪಡೆದು ಸಂಧಾನದಲ್ಲಿ ಭಾಗವಹಿಸಬಹುದಾಗಿರುತ್ತದೆ. (ತೆರೆದ ಜಾಗಗಳ ಚಕ್ ಬಂದಿ ಹಾಗೂ ಹೆಚ್ಚಿನ ವಿವರವನ್ನು ವಿಭಾಗೀಯ ಕಛೇರಿ, ಸಂಚಾರ ಶಾಖೆಯಲ್ಲಿ ಪಡೆದುಕೊಳ್ಳುವುದು)

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾನಿಗಮ:ಚಿಕ್ಕಮಗಳೂರು.

**ನಿಬಂಧನೆಗಳು:-**

1. ಪ್ರತಿ ವರ್ಷ ಹಿಂದಿನ ಪರವಾನಿಗೆ ಶುಲ್ಕದ ಮೇಲೆ ಶೇ.10%ರಷ್ಟು ಹೆಚ್ಚಾಗುವುದು.
2. ವಾಣಿಜ್ಯ ಮಳಿಗೆಗಳು ಯಾವ ಯಾವ ಸ್ಥಿತಿಯಲ್ಲಿವೆಯೋ ಹಾಗೇಯೇ ನೀಡಲಾಗುವುದು.
3. ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು/ನಿಬಂಧನೆಗಳಿಗೆ ಪರವಾನಗಿದಾರರು ಬದ್ದರಾಗಿರಬೇಕು. ಹಾಗೂ ಬಂಧ್ ಅವಧಿಯಲ್ಲಿ ಪರವಾನಿಗೆ ಶುಲ್ಕವನ್ನು ಕಡಿಮೆಗೊಳಿಸಲಾಗುವುದಿಲ್ಲ.
4. ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇದಿಸಲಾಗಿರುತ್ತದೆ.
5. ಮಳಿಗೆಗಳಲ್ಲಿ ಟೂರಿಸ್ಟ್ ಟ್ರಾವಲ್, ಮಧ್ಯಪಾನ, ಮಾಂಸ ಮತ್ತು ಇತರೆ ಕಾನೂನು ಬಾಹಿರ ಚಟುವಟಿಕೆಗಳಿರುವ ವ್ಯಾಪಾರ, ಮಾದಕ ವಸ್ತುಗಳು, ವಾಯು ಮಾಲಿನ್ಯ ಉಂಟುಮಾಡುವ ಹಾಗೂ ಸಂಸ್ಥೆಯ ಹಿತಕ್ಕೆ ಧಕ್ಕೆಯಾಗುವಂತಹ ವ್ಯಾಪಾರಗಳನ್ನು ಹೊರತು ಪಡಿಸಿದೆ.
6. ಡಾರ್ಮಿಟರಿ ಮತ್ತು ಲಾಡ್ಜಿಂಗ್ ವ್ಯವಹಾರ ನಡೆಸಲು ಆಯ್ಕೆಯಾಗುವ ಪರವಾನಿಗೆದಾರರೇ ಮೂಲ ಭೂತ ಸೌಕರ್ಯಗಳನ್ನು ನಿರ್ಮಿಸಿಕೊಳ್ಳಬಹುದಾಗಿರುತ್ತದೆ.
7. ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಮಳಿಗೆಗಳಲ್ಲಿ ಸಿಗರೇಟು/ಗುಟ್ಕಾ ಮತ್ತು ಇನ್ನಿತರೆ ತಂಬಾಕು ಪದಾರ್ಥಗಳ ಮಾರಾಟವನ್ನು ಕಡ್ಡಾಯವಾಗಿ ನಿಷೇದಿಸಿದೆ.
8. ಉಪಹಾರ ಗೃಹದಲ್ಲಿ ಹೊಟ್ಟಾಗಲಿ, ಸೌದೆಯ ಒಲೆಯನ್ನು ಉರಿಸುವಂತಿರುವುದಿಲ್ಲ, ಗ್ಯಾಸ್ ಮತ್ತು ವಿದ್ಯುತ್‌ನ್ನು ಮಾತ್ರ ಬಳಸುವುದು.
9. ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವಂತಿಲ್ಲ ಹಾಗೂ ಉಪಹಾರ ಗೃಹವನ್ನು ಹೊರತು ಪಡಿಸಿ, ಉಳಿದ ವಾಣಿಜ್ಯ ಮಳಿಗೆಗಳಲ್ಲಿ ಗ್ಯಾಸ್‌ನ್ನಾಗಲಿ, ಹೊಟ್ಟಾಗಲಿ ಅಥವಾ ವಿದ್ಯುತ್‌ನ್ನು ಬಳಸಿ ಒಲೆಯನ್ನು ಉರಿಸುವಂತಿರುವುದಿಲ್ಲ ಹಾಗೂ ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.
10. ಕರ್ನಾಟಕ ರಾಜ್ಯ ಸರ್ಕಾರವು ಜಾರಿ ಮಾಡಿರುವ 1957ರ ಗ್ರಾಹಕರ ಅಧಿನಿಯಮ-6/23(1)ರ ಅನ್ವಯ ಗ್ರಾಹಕರಿಗೆ ಮಳಿಗೆಯಲ್ಲಿ ವ್ಯಾಪಾರ ಮಾಡುವ ಸಾಮಾಗ್ರಿಗಳ ಪೊಟ್ಟಣದ ಮೇಲೆ ಮುದ್ರಿಸಿರುವ ಗರಿಷ್ಠ ಚಿಲ್ಲರೆ ಬೆಲೆಗಿಂತ ಹೆಚ್ಚಿಗೆ ಬೆಲೆ ಪಡೆಯುವುದಾಗಲಿ ಅಥವಾ ಬೆಲೆಯನ್ನು ಅಳಿಸುವುದು/ತಿದ್ದುವುದು/ಇತ್ಯಾದಿಗಳನ್ನು ಮಾಡಿದ ಬಗ್ಗೆ ದೂರುಗಳು ಬಂದಲ್ಲಿ ನೀಡಲಾದ ಪರವಾನಿಗೆಯನ್ನು ರದ್ದು ಪಡಿಸಲಾಗುವುದು
11. ಹರಾಜು/ಟೆಂಡರ್/ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷನ್ 32ಎ (ಎ)(111)ರಲ್ಲಿ ಪರಿಷ್ಕೃತ ಸ್ಟಾಂಪ್ ಆಕ್ಟ್ ನಂ:8/2003 ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ.
12. ಆಯ್ಕೆ ಆದ ಪರವಾನಿಗೆದಾರರು ಸಂಧಾನದಲ್ಲಿ ಸಲ್ಲಿಸಿರುವ ಇಎಂಡಿ ಹಣವನ್ನು ಹೊಂದಾಣಿಕೆ ಮಾಡಿಕೊಂಡು ಸೂಚಿಸಿರುವ ಪರವಾನಿಗೆ ಶುಲ್ಕದ ಆರು (6) ಪಟ್ಟು ಹಣವನ್ನು ಭದ್ರತಾ ಠೇವಣಿಯನ್ನು ಡಿ.ಡಿ. ರೂಪದಲ್ಲಿ **"ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ಚಿಕ್ಕಮಗಳೂರು ವಿಭಾಗ "** Divisional Controller, K.S.R.T.C.

Chikmagalur Division, ಇವರ ಹೆಸರಿನಲ್ಲಿ ಪಾವತಿಸುವುದು ಹಾಗೂ ಮೂರು ತಿಂಗಳ ಹೆಚ್ಚುವರಿ ಭದ್ರತಾ ಠೇವಣಿ ಹಣವನ್ನು ಎರಡನೇ ವರ್ಷದಿಂದ ಮೂರನೇ ವರ್ಷದ ಪರವಾನಿಗೆ ಅವಧಿ ಮುಕ್ತಾಯಕ್ಕಿಂತ ಮುಂಚಿತವಾಗಿ ಪಾವತಿಸುವುದು.

13. ಆಯ್ಕೆಗೊಂಡ ಪರವಾನಿಗೆದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಭಾರತ ಸರ್ಕಾರ/ಕರ್ನಾಟಕ ರಾಜ್ಯ ಸರ್ಕಾರ ವಿಧಿಸುವ ಸೇವಾ ತೆರಿಗೆಯನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು
14. ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡುವುದು.
15. ಅಯ್ಕೆಗೊಂಡ ಪರವಾನಿಗೆದಾರರು ಮಳಿಗೆ/ ದೂರವಾಣಿ ಭೂತ್‌ನ್ನು ಸ್ವತ: ನಡೆಸುವುದಲ್ಲದೆ ಪರಬಾರೆ ಮಾಡುವಂತಿಲ್ಲ.
16. ಅಯ್ಕೆಗೊಂಡ ಪರವಾನಿಗೆದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇಎಂಡಿ., ಹಣವನ್ನು ಹಿಂತಿರುಗಿಸಲಾಗುವುದು.
17. ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕ, ಸೇವಾ ತೆರಿಗೆ ಶುಲ್ಕ, ನೀರಿನ ಶುಲ್ಕ, ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು 7ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು.
18. ಸಂಧಾನದಾರರು ನಿಗಮಕ್ಕೆ ಯಾವುದೇ ಷರತ್ತುಗಳನ್ನು ಹಾಕುವಂತಿಲ್ಲ, ಸಂಸ್ಥೆಯು ಕಾಲಕಾಲಕ್ಕೆ ವಿಧಿಸುವ ಎಲ್ಲ ಷರತ್ತುಗಳನ್ನು ಒಪ್ಪಿಕೊಳ್ಳತಕ್ಕದಾಗಿರುತ್ತದೆ.
19. ದೂರವಾಣಿ ಭೂತ್ ಅಂಗವಿಕಲರಿಗೆ ಮಾತ್ರ ಮೀಸಲಿರಿಸಿದೆ.
20. ಕಾಮಗಾರಿಗಾಗಿ ಮಳಿಗೆ ಅವಶ್ಯಕತೆ ಇದ್ದಾಗ ನಿಗಮದವತಿಯಿಂದ 1 ತಿಂಗಳು ಮುಂಚಿತವಾಗಿ ನೋಟಿಸ್ ನೀಡಿ ತೆರವುಗೊಳಿಸಲಾಗುವುದು.
21. ಇ–ಟೆಂಡರ್ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಮುಂದೂಡುವ & ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದರಿಸಿಕೊಂಡಿದೆ.
22. ಪಾರ್ಕಿಂಗ್ ಮಾಡಲು ಲಭ್ಯವಿರುವ ಸ್ಥಳದಲ್ಲಿ ಕನಿಷ್ಟ ಎರಡು ದ್ವಿಚಕ್ರ/ತ್ರಿಚಕ್ರ/ಕಾರುನ್ನು ಪಾರ್ಕಿಂಗ್ ಸ್ಥಳದಲ್ಲಿ ಶೇ.2%ರಷ್ಟನ್ನು ಅಂಗವಿಕಲರ ವಾಹನಗಳನ್ನು ಉಚಿತವಾಗಿ ನಿಲ್ಲಿಸಲು ನೀಡಬೇಕಾಗಿರುತ್ತದೆ.
23. ಕಡ್ಡಾಯವಾಗಿ ಪಾನ್‌ಕಾರ್ಡ್ ಹೊಂದಿರಬೇಕಾಗಿರುತ್ತದೆ.
24. ನಿಗದಿತ ಜಾಗಕ್ಕಿಂತ ಹೆಚ್ಚುವರಿ ಜಾಗ ಉಪಯೋಗಿಸಿಕೊಳ್ಳುತ್ತಿರುವುದು ಕಂಡುಬಂದಲ್ಲಿ ಹಾಲಿ ಪಾವತಿಸುತ್ತಿರುವ ಮಾಸಿಕ ಪರವಾನಿಗೆ ಶುಲ್ಕದ 3 ಪಟ್ಟು ಅಂದರೆ ಪ್ರೊರೆಟಾ ಮಾದರಿಯಲ್ಲಿ ದಂಡವನ್ನು ಪಾವತಿಸಿಕೊಂಡು ಹೆಚ್ಚುವರಿ ಸ್ಥಳವನ್ನು ತೆರವುಗೊಳಿಸಲು ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು ಅಥವಾ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಕರಾರು ಒಪ್ಪಂದವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು.
25. ಬ್ಯಾಂಕ್ ಎಟಿಎಂ. ಕೌಂಟರ್‌ಗಳಿಗೆ ಆಯ್ಕೆಯಾದ 7 ದಿನದೊಳಗಾಗಿ ಭದ್ರತಾ ಠೇವಣಿ, ಮುಂಗಡ ಪರವಾನಿಗೆ ಶುಲ್ಕ, ಸೇವಾ ತೆರಿಗೆ ಶುಲ್ಕ ಪಾವತಿಸಿ, ಕರ್ನಾಟಕ ಸ್ಟಾಂಪ್ ಆಕ್ಟ್‌ನಲ್ಲಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಬೇಕಾಗಿರುತ್ತದೆ.
26. ಬ್ಯಾಂಕ್ ಎಟಿಎಂ. ಕೌಂಟರ್‌ಗಳಿಗೆ ಕರಾರು ಒಪ್ಪಂದವನ್ನು ಮಾಡಿಕೊಂಡ 40 ದಿನಗಳವರೆಗೆ Gestation ಅವಧಿ ನೀಡಲಾಗುವುದು ನಂತರದ ದಿನದಿಂದ ಬಾಡಿಗೆ ಪ್ರಾರಂಭಗೊಳ್ಳುತ್ತದೆ.
27. ಎಟಿಎಂ ಕೌಂಟರ್‌ಗೆ VSAT ಅಳವಡಿಸಲು 10*10 ಚದರ ಅಡಿ ಜಾಗವನ್ನು ಮೇಲ್ಛಾವಣಿಯ ಮೇಲೆ ನೀಡಲಾಗುವುದು.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ.
ಕರಾರಸಾನಿಗಮ:ಚಿಕ್ಕಮಗಳೂರು ವಿಭಾಗ.